ಶಿವರಾವು ಬೇಡೆನ್ನಲಿಲ್ಲ. ಹಸಿವೂ ಇರಲಿಲ್ಲ.

"ಹೌದೂ ಇಷ್ಟು ದಿವ್ಸ ಎಲ್ಲಿದ್ದ್ಯೋ, ನಮ್ಮ ನೆನಪೇ ಬರಲಿಲ್ಲೇನೋ ನಿನಗೆ?" ಅಂತ ಕೇಳಿದಳು ದೊಡ್ಡ ತಂಗಿ. ಸಣ್ಣವಳಿದ್ದಾಗ ಇವಳು ಯಾವಾಗಾದರೂ ದೊಡ್ಡವಳಾಗಿ ಚೆಂದಾಗಿ ಮಾತಾಡ್ತಾಳೋ ಅಂತ ಅನಿಸೋದು ಸಣ್ಣವಳಿದ್ದಾಗ. ದೊಡ್ಡವರು ಸಣ್ಣವರು ಭೇದ ಇಲ್ಲದೆ ಮಾತಾಡ್ತಿರೋಳು. ಅಂಥ ಹುಡುಗಿ ತನ್ನನ್ನು ಹೀಗೆ ಪ್ರಶ್ನಿಸುತ್ತಿದ್ದರೆ ಅವಳೆಡೆಗೆ ಆಶ್ಚರ್ಯದಿಂದ ನೋಡಿದ. ಉತ್ತರ ಕೊಡಲಿಲ್ಲ. ದೊಡ್ಡ ತಂಗಿ ಬಿಗಿ ಹಿಡಿದು ಮತ್ತೆ ಕೇಳಲೂ ಇಲ್ಲ. ಅನುವು ಮಾಡಿಕೊಂಡು ಅಣ್ಣಯ್ಯನನ್ನು ಮಾತಾಡಿಸಿದರೂ ಉತ್ತರ ಬಾರದ್ದಕ್ಕೆ ಮನಸ್ಸು ಸಣ್ಣ ಮಾಡಿಕೊಂಡಳು. ಕುಳಿತಿದ್ದ ಸ್ಥಳದಲ್ಲೇ ಗೋಡೆಗೆ ಆತುಕೊಂಡಳು. ಉಳಿದವರಿಬ್ಬರು ಮತ್ತೆ ಮಲಗೋ ಪ್ರಯತ್ನದಲ್ಲಿದ್ದರು.

"ಹೊರಗೆ ನೀರಿಟ್ಟೀನಿ... ಕಾಲು ತೊಳ್ಕೊ" ಒಳಗಿಂದ ಹೇಳಿದಳು ಶಾಂತಿ.

ಶಿವರಾವು ಸ್ವಲ್ಪ ಹೊತ್ತು ಹಂಗೇ ಕೂತಿದ್ದು ಎದ್ದ. ಊಟದ ಶಾಸ್ತ್ರ ಮುಗಿಸಿದ.

ಊಟ ಮಾಡುವಾಗ ಯಾರೂ ಮಾತಾಡಲಿಲ್ಲ. ಶಾಂತಿಯನ್ನು ಬಿಟ್ಟು ಉಳಿದ ಮೂವರು ತಂಗಿಯರು ಮತ್ತೆ ಮಲಗಿಕೊಂಡಿದ್ದರು.

ಶಿವರಾವು ಸುತ್ತ ನೋಡಿದ. ಮನೇಲಿರೋ ಯಾವ ಸಾಮಾನೂ ತನ್ನನ್ನ ಕೈಮಾಡಿ ಕರೆದು, ತಿಂಗಳುಗಟ್ಟಲೇ ಅನ್ನ ಹಾಕುವಂಥವಿಲ್ಲ. ಇಷ್ಟು ಹೊತ್ತು ಎಲ್ಲಿ ಕುಂತಿದ್ದನೋ ಅಲ್ಲೇ ಕುಸಿದು ಕುಂತ.

ಕೈ ಒರೆಸಿಕೊಳ್ಳುತ್ತ ಬಂದಳು ಶಾಂತಿ. ಕಂದೀಲು ಬತ್ತಿ ಸಣ್ಣ ಮಾಡಿದಳು. ಬಾಗಿಲಿಗೆ ಆನಿಕೊಂಡು ಮಳೆ ನೋಡ್ತಾ ನಿಂತುಕೊಂಡಳು.

"ನಿನ್ನ ಸಲುವಾಗಿ ಎಷ್ಟೋ ಹುಡುಕಿದ್ವಿ. ಹುಡುಕಿಸಿದ್ವಿ. ಅಪ್ಪ ಆ ಚಿಂತೆಯೊಳಗೇ ಹೋದ. ಯಾವ ರಾತ್ರಿ ಸಪ್ಪಳಾದರೂ ನೀನೇ ಏನೋ ಅಂತ ಓಡಾಡ್ತಿದ್ವಿ. ಅಪ್ಪನ್ನ ಅಮ್ಮನ್ನ ಚಿತ್ರಹಿಂಸೆ ಮಾಡಿದಿ".

ಶಿವರಾವು ಮಾತಾಡಲಿಲ್ಲ. ಸಣ್ಣಗೆ ಸರಿದು ಕೂತುಕೊಂಡ.

"ಅವತ್ತು ರಾತ್ರಿ ಮಳೆ ಬರತಿತ್ತು. ಮುದುಕಪ್ಪನ ಜತೆ ಹೋದೆ" ಹಳೆ ಘಟನೆಗಳನ್ನು ನೆನಪು ಮಾಡಿಕೊಳ್ಳಲೆಂಬಂತೆ ಎರಡು ನಿಮಿಷ ನಿಂತ.

ಶಾಂತಕ್ಕನ ದೃಷ್ಟಿ ಇನ್ನೂ ಮಳೆ ಮೇಲೇ ಇತ್ತು.

"ಮುದುಕಪ್ಪ ಸಿಕ್ಕಿಬಿದ್ದ. ಅವನು ಹೇಳ್ತಿದ್ದ ಇಂಥ ಕಳ್ಳತನ ಮಾಡುವಾಗ ಸಿಗಿಬಿದ್ರೆ ದೊಡ್ಡ ಶಿಕ್ಷೆ ಆಗುತ್ತ ಅಂತ. ಸಿಗಿಬಿದ್ರೆ ನನ್ನ ಗತಿ ಏನಾಗುತ್ತ ಅಂತ ನನಗೆ ಆ ಕ್ಷಣನೇ ಗೊತ್ತಾಯ್ತು. ಕಳ್ಳನ..."

ಏನೋ ಆಲೋಚನೆ ಬಂದು ಶಾಂತಿ ಮಿಟ್ಟಬಿದ್ದಳು. ಉದ್ವಿಗ್ನಳಾಗಿ ಶಿವರಾವುನ ನೋಡಿದಳು.

"ಈ ಊರಾಗಿರಾಕ ಧೈರ್ಯ ಇಲ್ದಂಗಾಯಿತು. ಮುದುಕಪ್ಪ ಹೇಳೋನು ಬೊಂಬಾಯಿ ಭಾಳ ಮಂದಿಗೆ ಅನುಕೂಲ ಆಗೋ ಊರು ಅಂತ" ನಿಲ್ಲಿಸಿದ ಶಿವರಾವು.

ಶಾಂತಿ ಅಂಜಿಕೊಂಡು ನೋಡಿದಳು ಅವನ ಕಡೆಗೆ. ಆಮೇಲೆ ಆಕೆ ದೃಷ್ಟಿ ಮಂಚದ ಕೆಳಗಿಟ್ಟಿದ್ದ ಕಟ್ಟಿಗೆ ಡಬ್ಬಿ ಮೇಲೆ ಹೋಯಿತು. ಅದರಲ್ಲಿ ಬೆವರಿಗೆ ಕಮಟೆದ್ದು ಹೋಗಿದ್ದ ಎಂಬತ್ತು ರೂಪಾಯಿ ಇದ್ದವು. ಪೈಸೆಗೆ ಪೈಸೆ ಜಮಾ ಹಾಕಿ ಕೂಡಿಸಿದ ರೊಕ್ಕ ಅವು. ಇದ್ದಲ್ಲೇ ಕೆಳಗೆ ಜಾರುತ್ತಾ ಕುಂತಳು. ಅಂಥ ಚಳಿಯೊಳಗೂ ಸಣ್ಣಗೆ ಬೆವರಿದಳು.

"ನಮ್ಮನ್ನ ಹಿಂಗ ಬದುಕೋಕೂ ಬಿಡದಿಲ್ಲೇನೋ ಶಿವ?" ಅಂದಳು ಶಾಂತಿ ಪ್ರಪಂಚದೊಳಗಿನ ದೈನ್ಯವನ್ನೆಲ್ಲ ಮುಖದಲ್ಲಿ ತುಂಬಿಕೊಂಡು.

ಶಿವರಾವು ಶಾಂತಕ್ಕನ ಕಡೆಗೆ ಅಯೋಮಯನಾಗಿ ನೋಡಿದ.

ಕನಸಿಂದ ಎಚ್ಚರಗೊಂಡವಳಂತೆ ಸಟ್ಟನೆ ಎದ್ದು ಶಿವರಾವು ಮಂಚದ ಹತ್ತಿರ ಬಂದಳು. ಆಯಾಸವನ್ನು ಹತ್ತಿಕ್ಕಿಕೊಳ್ಳುವವಳಂತೆ ಹೇಳಿದಳು–